ಸ್ಮಶಾನಕ್ಕೆ ಆವರಣ ಗೋಡೆಯನ್ನು ಕಟ್ಟಿಸಲು ಚಂದಾ ವಸೂಲಿ ಮಾಡಲಾಗುತ್ತಿತ್ತು.

ಗುಂಡನ ಬಳಿಗೆ ಚಂದಾ ಕೇಳಲು ಬಂದಾಗ ಅವನು ಚಂದಾ ಕೊಡಲು ನಿರಾಕರಿಸಿದ.

ಅದಕ್ಕೆ ಅವನು ಕೊಟ್ಟ ಕಾರಣ ಹೀಗಿತ್ತು: 'ಸ್ಮಶಾನದ ಹೊರಗೆ ಇರುವವರು ಒಳಗೆ ಹೋಗಲು ಇಚ್ಛಿಸುವುದಿಲ್ಲ. ಹಾಗೆಯೇ ಸ್ಮಶಾನದ ಒಳಗಡೆ ಇರುವವರು ಸ್ಮಶಾನದ ಹೊರಗೆ ಬರಲು ಸಾಧ್ಯವಿಲ್ಲ. ಅಂದ ಮೇಲೆ ಸ್ಮಶಾನಕ್ಕೆ ಆವರಣದ ಗೋಡೆ ಏಕೆ ಬೇಕು?'

★★★

ತನ್ನ ಬಳಿಗೆ ಬಂದ ರೋಗಿಯನ್ನು ಕುರಿತು ಡಾಕ್ಟರ್ ಹೇಳಿದರು– ನಿನ್ನ ಆರೋಗ್ಯ ಹದಗೆಡಲು ನಿನ್ನ ಬೀಡಿ ಸೇದುವ ಚಟವೇ ಮುಖ್ಯ ಕಾರಣ. ಒಂದು ದಿವಸಕ್ಕೆ ಎಷ್ಟು ಬೀಡಿಗಳನ್ನು ಸೇದುತ್ತೀಯಾ?



ರೋಗಿ: ಡಾಕ್ಟ್ರೇ, ನಾನು ದಿವಸಕ್ಕೆ ಇಪ್ಪತ್ತು ಬೀಡಿಗಳನ್ನು ಸೇದುತ್ತೇನೆ.

ಡಾಕ್ಟರ್: ನಿನ್ನ ಆರೋಗ್ಯ ಸುಧಾರಿಸಬೇಕಾದರೆ ದಿವಸಕ್ಕೆ ಒಂದೇ ಬೀಡಿಯನ್ನು ಸೇದಬೇಕು. ಅದೂ ಊಟದ ನಂತರ.

ಒಂದು ತಿಂಗಳ ನಂತರ ಆ ರೋಗಿ ಪುನಃ ಡಾಕ್ಟರ್ ಬಳಿಗೆ ಬಂದ. ಅವನ ಆರೋಗ್ಯ ತುಂಬಾ ಸುಧಾರಿಸಿತ್ತು.

ಡಾಕ್ಟರ್: ನೋಡು, ನಾನು ಹೇಳಿದಂತೆ ಕೇಳಿದ್ದಕ್ಕಾಗಿ ನಿನ್ನ ಆರೋಗ್ಯ ಎಷ್ಟೊಂದು ಸುಧಾರಿಸಿದೆ!

ರೋಗಿ: ನೀವು ಹೇಳಿದಂತೆ ಮಾಡಲು ನಾನು ತುಂಬ ಕಷ್ಟ ಪಡಬೇಕಾಯಿತು ಡಾಕ್ಟ್ರೇ, ದಿವಸಕ್ಕೆ ಇಪ್ಪತ್ತು ಬಾರಿ ಊಟ ಮಾಡುವುದೆಂದರೆ ಏನು ಸಾಮಾನ್ಯ ವಿಷಯವೇ!?

★★★

ತಿಪ್ಪೇಶಿ: ಚೀನಾದ ಗೋಡೆಯಲ್ಲಿ ಅಂತಹ ವಿಶೇಷತೆ ಏನಿದೆಯೆಂದು ಅದನ್ನು ಜಗತ್ತಿನ ಏಳು ಆಶ್ಚರ್ಯಗಳಲ್ಲಿ ಸೇರಿಸಿದ್ದಾರೆ?

ಗುಂಡ: ಚೀನೀಯರು ನಿರ್ಮಿಸಿರುವ ವಸ್ತುಗಳಲ್ಲಿ ಇದೊಂದೇ ಬಹಳ ವರ್ಷಗಳ ಕಾಲ ಬಾಳಿಕೆ ಬಂದಿರೋದು. ಬಹುಶಃ ಅದಕ್ಕೇ ಏಳು ಅದ್ಭುತಗಳಲ್ಲಿ ಸೇರಿಸಿರಬೇಕು.

★★★




ಸಂತಾ: ಒಬ್ಬ ವ್ಯಕ್ತಿಯ ತಲೆ ಪೂರ್ತಿ ಬೋಳಾಗಿದೆ. ಆದರೆ ಅವನು ದಿನಾಲೂ ಸೆಲೂನಿಗೆ ಏಕೆ ಹೋಗ್ತಾನೆ?

ಬಂತಾ: ಏಕೆಂದರೆ ಆ ಸೆಲೂನ್ ಅವನದ್ದೇ ಆಗಿದೆ. ಅವನೇ ಅಲ್ಲಿ ಕ್ಷೌರಿಕ!

★★★

ಚಿತ್ರಕಲೆ ಪ್ರದರ್ಶನವೊಂದರಲ್ಲಿ ಒಂದು ಚಿತ್ರವನ್ನು ವೀಕ್ಷಿಸುತ್ತಿದ್ದ ಒಬ್ಬ ವ್ಯಕ್ತಿ ತನ್ನ ಪಕ್ಕದಲ್ಲಿ ನಿಂತಿದ್ದ ವ್ಯಕ್ತಿಗೆ ಕೇಳಿದ:

'ಇಲ್ಲಿ ತೂಗು ಹಾಕಿರುವ ಚಿತ್ರ ಸೂರ್ಯೋದಯದ್ದೋ ಅಥವಾ ಸೂರ್ಯಾಸ್ತದ್ದೋ?'

ಪಕ್ಕದವನು ಖಚಿತ ಧ್ವನಿಯಲ್ಲಿ ಉತ್ತರಿಸಿದ: ಬಹುಶಃ ಅದು ಸೂರ್ಯಾಸ್ತದ್ದೇ ಇರಬೇಕು. ಏಕೆಂದರೆ ಈ ಕಲಾವಿದ ಬೆಳಿಗ್ಗೆ ದಿನಾ ಏಳುವುದೇ ಹತ್ತು ಗಂಟೆಗೆ!

★★★

ಪುಟ್ಟ: ನನಗೆ ಕೋಪ ಬಂದರೆ ನಾನು ಇಡೀ ಜಗತ್ತನ್ನೇ ಅಳಿಸಿ ಹಾಕುತ್ತೇನೆ!

ಪುಟ್ಟಿ: ನಾನು ನಿನಗೆ ರಬ್ಬರ್ ಕೊಟ್ಟರೆ ತಾನೆ.?

**(ಸಂಗ್ರಹ): ಮುರಲೀಧರ ಕುಲಕರ್ಣಿ**

---

ತರುಣಿ: ಅಪ್ಪಾ, ನಾನು ದೂರದ ಹುಡುಗನೋರ್ವನನ್ನು ಪ್ರೀತಿಸುತ್ತಿದ್ದೇನೆ. ಅವನು ಲಂಡನ್‌ನಲ್ಲಿ ವಾಸವಾಗಿದ್ದು ನಾವೊಂದು ಡೇಟಿಂಗ್ ವೆಬ್‌ಸೈಟ್‌ನಲ್ಲಿ ಭೇಟಿಯಾದೆವು. ಫೇಸ್‌ಬುಕ್‌ನಲ್ಲಿ ಸ್ನೇಹಿತರಾದೆವು, ವಾಟ್ಸಪ್‌ನಲ್ಲಿ ಸಂಭಾಷಿಸಿದೆವು. ಸ್ಕೈಪ್‌ನಲ್ಲಿ ಪ್ರೀತಿ ತೋಡಿಕೊಂಡೆವು ಮತ್ತು 2 ತಿಂಗಳಿಂದೀಚೆಗೆ ವೈಬರ್ ಮುಖಾಂತರ ಸಂಬಂಧ ಬೆಳೆಸಿದ್ದೇವೆ. ನಮಗೆ ನಿಮ್ಮ ಆಶೀರ್ವಾದ ಬೇಕು...

ಅಪ್ಪ: ಒಳ್ಳೆಯದು ಮಗಳೇ, ನೀವೀಗ ಟ್ವಿಟ್ಟರ್‌ನಲ್ಲಿ ವಿವಾಹವಾಗಿ, ಆನ್‌ಲೈನ್‌ನಲ್ಲಿ ಮಧುಚಂದ್ರ ಪೂರೈಸಿ, ಇ–ಬೇಯ್‌ನಲ್ಲಿ ಮಕ್ಕಳನ್ನು ಪಡೆಯಿರಿ, ಜಿ–ಮೇಲ್ ಮುಖಾಂತರ ಅವರನ್ನು ಕಳಿಸಿಕೊಡಿ ಮತ್ತು ಪತಿ ಸಾಕೆನಿಸಿದರೆ ನೀನವನನ್ನು ಓ ಎಲ್ ಎಕ್ಸ್‌ನಲ್ಲಿ ಮಾರಿಬಿಡು!



ಗಣೇಶ್ ಆಚಾರ್ಯ

## ಗುರುತು!

ಕಿಟ್ಟು ಮತ್ತು ಪುಟ್ಟು ಸೇರಿ 2 ಕುದುರೆಗಳನ್ನು ಖರೀದಿಸಿದರು. ಆದರೆ ಯಾವ ಕುದುರೆ ಯಾರದ್ದು ಎಂದು ಗುರುತಿಸುವುದು ಹೇಗೆಂಬ ಸಮಸ್ಯೆ ಉದ್ಭವಿಸಿತು.

ಕಿಟ್ಟು: ನಾನು ನನ್ನ ಕುದುರೆಯ ಬಾಲ ಕತ್ತರಿಸುತ್ತೇನೆ. ಆಗ ಸುಲಭವಾಗಿ ಅದನ್ನು ಗುರುತಿಸಬಹುದು.

ಆದರೆ ಮರುದಿನ ಬೆಳಿಗ್ಗೆ ಪುಟ್ಟುವಿನ ಕುದುರೆಯ ಬಾಲವೂ ಕತ್ತರಿಸಲ್ಪಟ್ಟಿತು!

ಕಿಟ್ಟು: ಇಂದು ನಾನು ನನ್ನ ಕುದುರೆಯ ಬಲ ಕಿವಿಯನ್ನು ಕತ್ತರಿಸುತ್ತೇನೆ.

ಮರುದಿನ ಗಮನಿಸಿದಾಗ ಪುಟ್ಟುವಿನ ಕುದುರೆಯ ಬಲ ಕಿವಿಗೂ ಕತ್ತರಿ ಬಿದ್ದಿತ್ತು!

ಇಕ್ಕಟ್ಟಿಗೆ ಬಿದ್ದ ಇಬ್ಬರೂ ತುಂಬಾ ಗಹನವಾಗಿ ಯೋಚಿಸಿ ವಿಚಾರ ಮಾಡಿದ ನಂತರ ಬಿಳಿಯ ಕುದುರೆಯನ್ನು ಕಿಟ್ಟುವೂ, ಕಪ್ಪು ಕುದುರೆಯನ್ನು ಪುಟ್ಟುವೂ ಇಟ್ಟುಕೊಳ್ಳುವುದೆಂದು ನಿರ್ಧರಿಸಿಬಿಟ್ಟರು!

**(ಸಂ) ರಮಣ್‌ಶೆಟ್ಟಿ, ರೆಂಜಾಳ್**